## ಕರ್ನಾಟಕ ಸರ್ಕಾರದ ನಡವಳಿಗಳು

Tunga lift 14 (8)

ವಿಷಯ: ತುಂಗಾ ಏತ ನೀರಾವರಿ ಯೋಜನೆ.

++ ++ ++

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ:ಓಡಬ್ಲ್ಯೂಡಿ 10 ಎಂಎನ್‌ಓ 91, ದಿನಾಂಕ:2-2-91.
2. ಮುಖ್ಯ ಇಂಜನಿಯರ್, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗರವರ ಪತ್ರ ಸಂಖ್ಯೆ:ಮುಇಂ/ತುಂಮೇಯೋ/ಡಿಸಿಇ-1/ಟಿಎ-1/ಪಿಬಿ-5/ಟಿಎಲ್ಐಎಸ್/8/97-98, ದಿನಾಂಕ:25-9-97

**ಪ್ರಸ್ತಾವನೆ:**

ಓದಲಾಗಿದೆ(1)ರಲ್ಲಿ ತುಂಗಾ ಏತ ನೀರಾವರಿ ಯೋಜನೆಯ ರೂ.12.37 ಕೋಟಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. (1990-91ನೇ ಸಾಲಿನ ದರಪಟ್ಟಿಯಂತೆ)

2. ಓದಲಾಗಿದೆ(2)ರಲ್ಲಿ ಸದರಿ ಯೋಜನೆಯನ್ನು ಕೆಳಕಂಡಂತೆ 97-98ರ ದರಪಟ್ಟಿ ಪ್ರಕಾರ ರೂ.24.12 ಕೋಟಿಗೆ ಪರಿಷ್ಕರಿಸಿ ತಯಾರಿಸಲಾಗಿದೆ. ಈ ಯೋಜನೆಯಿಂದ ಐಹೊಳೆ, ಬಾರೇಹಳ್ಳ ಮತ್ತು ಗೌಡನಕೆರೆ ಹಳ್ಳಿಗಳ 4188 ಎಕರೆ ಕುಂಠಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸಲು ಸಣ್ಣ ನೀರಾವರಿ ಅಡಿಯಲ್ಲಿ ಯೋಜಿಸಲಾಗಿತ್ತು.

ಈ ಯೋಜನೆಯ ಅಂದಾಜಿಗೆ ದಿನಾಂಕ:8-7-97 ರಂದು ನಡೆದ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಹಾಗೂ ದಿನಾಂಕ:26-7-97ರಂದು ನಡೆದ ಬೃಹತ್ ನೀರಾವರಿ ಯೋಜನೆಗಳ ನಿಯಂತ್ರಣಾ ಮಂಡಳಿಯ ಸಭೆಯಲ್ಲಿ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲಾಗಿದೆ.

ಎ. ಮೊದಲನೇ ಹಂತದಲ್ಲಿ ತುಂಗಾ ನದಿಯಿಂದ 84 ಕ್ಯೂಸೆಕ್ಸ್ ನೀರನ್ನು ಎತ್ತಿ ರೂ. 16.72 ಕೋಟಿಗಳ ವೆಚ್ಚದಲ್ಲಿ ಐಹೊಳೆ ಕೆರೆಗೆ ತುಂಬಿ ಅಲ್ಲಿಂದ ಬಾರೇಹಳ್ಳಕೆರೆಗೆ ಹರಿಸಲು ಉದ್ದೇಶಿಸಿದೆ. ಇದರಿಂದ 4221 ಎಕರೆ ಖಾರೀಫ್ ಭತ್ತ ಹಾಗೂ 3270 ಎಕರೆ ಅರೆ ಖಾರೀಫ್ ಕುಂಠಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸಲು ಉದ್ದೇಶಿಸಿದೆ.

ಬಿ. ಎರಡನೇ ಹಂತದಲ್ಲಿ ಬಾರೇಹಳ್ಳಕೆರೆಯಿಂದ 21.35 ಕ್ಯೂಸೆಕ್ಸ್ ನೀರನ್ನು ರೂ.7.40 ಕೋಟಿ ವೆಚ್ಚದಲ್ಲಿ ಎತ್ತಿ ಗೌಡನಕೆರೆ ಹಾಗೂ ಮಧ್ಯದಲ್ಲಿರುವ ಇತರ ಕೆರೆಗಳಿಗೆ ಹಾಯಿಸಿ 941 ಎಕರೆ ಖಾರೀಫ್ ಭತ್ತ ಹಾಗೂ 900 ಎಕರೆ ಖುಷ್ಕಿ ಕುಂಠಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲು ಉದ್ದೇಶಿಸಿದೆ.

ಈ ಯೋಜನೆಗೆ 1998-99ನೇ ಸಾಲಿನಲ್ಲಿ ಹೊಸ ಯೋಜನೆಗಳ ಅಡಿಯಲ್ಲಿ ರೂ.5 ಲಕ್ಷ ಅನುದಾನ ಒದಗಿಸಲಾಗಿದೆ.

5. ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ನೀಇ 58 ಎಂಎಂಎಂ 95, ಬೆಂಗಳೂರು, ದಿನಾಂಕ:27-02-1999</u>

ಶಿವಮೊಗ್ಗ ಜಿಲ್ಲೆಯ ಗಾಜನೂರು ಬಳಿ ಇರುವ ಸಕ್ಕರೆಬೈಲು ಹತ್ತಿರ ತುಂಗಾ ನದಿಯಿಂದ ನೀರನ್ನು ಎತ್ತಿ ಕೆಲವು ಕೆರೆಗಳ ಕುಂಠಿತ ಅಚ್ಚುಕಟ್ಟಿಗೆ ನೀರು ಪೂರೈಸುವ ತುಂಗಾ ಏತ ನೀರಾವರಿ ಯೋಜನೆಯ ರೂ.24.12 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

......2.,

2. ಸದರಿ ಕಾಮಗಾರಿಯನ್ನು ನೂತನವಾಗಿ ಸ್ಥಾಪಿತವಾಗಿರುವ ಕರ್ನಾಟಕ ನೀರಾವರಿ ನಿಗಮದಡಿ ಕೈಗೊಳ್ಳುವುದು.

3. ಈ ಕಾಮಗಾರಿಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ 4701-80-800-0-01 ಅಡಿ ಭರಿಸುವುದು.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ನೀಇ 177 ಆಕೋ-1/98, ದಿನಾಂಕ:2-1-99ರಲ್ಲಿ ನೀಡಲಾದ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎ.ಎಲ್. ಜಗದೀಶ್ 2/1/99
(ಎ.ಎಲ್.ಜಗದೀಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-2),
ನೀರಾವರಿ ಇಲಾಖೆ.

ಗೆ:

1. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2. ಮುಖ್ಯ ಇಂಜನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ
3. ವಿಶೇಷಾಧಿಕಾರಿಗಳು ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ, (ಆರ್ಥಿಕ ಕೋಶ), ಲೋಕೋಪಯೋಗಿ ಇಲಾಖೆ, ವಿಧಾನ ಸೌಧ, ಬೆಂಗಳೂರು
4. ಹೆಚ್ಚುವರಿ ಪ್ರತಿಗಳು